ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಹಾಗೂ ಎಫ್.ಟಿ.ಎಸ್.ಸಿ-**1,** ಹಾವೇರಿ
ಎಸ್.ಸಿ.**18/2020**

PW- 10

CW-15

ಸಾಕ್ಷಿದಾರರ ಹೆಸರುಃ ಮದುಕೇಶ್ವರ ಚೌದರಿ

ತಂದೆಯ ಹೆಸರುಃ ವಿಟ್ಟಪ್ಪ

ವಯಸ್ಸುಃ 80 ವರ್ಷ

ಉದ್ಯೋಗಃ ವ್ಯವಸಾಯ

ಹಾಲಿ ವಾಸ ಸ್ಥಳಃ ಬನವಾಸಿ , ಶಿರಸಿ

ದಿನಾಂಕ**: 29.11.2024** ರಂದು ಸತ್ಯ ಪ್ರತಿಜ್ಞೆ ಬೋಧಿಸಲಾಯಿತು**.**

ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ

ಮೃತ ಶಾಂತಾಬಾಯಿ ನನ್ನ ತಂಗಿ. ಚಾಸಾ-1 , 14 ನನ್ನ ತಮ್ಮಂದಿರು. ಚಾಸಾ-16 ನನ್ನ ತಮ್ಮನ ಹೆಂಡತಿ. ನನ್ನ ತಂಗಿಗೆ ಚಾಸಾ-8 ರಿಂದ 12 ಒಟ್ಟು 5 ಜನ ಮಕ್ಕಳು. ಚಾಸಾ-17 ನನ್ನ ಮಗ. ಚಾಸಾ-18 ನನ್ನ ತಮ್ಮ ಚಾಸಾ-14 ರವರ ಮಗ. ಮೃತ ಶಾಂತಾಬಾಯಿ ಶಿಗ್ಗಾಂವ ಪಟ್ಟಣದ ಹಳೆಪೇಟೆ ತಮ್ಮ ಸ್ವಂತ ಮನೆಯಲ್ಲಿ ಒಬ್ಬಳೇ ವಾಸಿಸುತ್ತಿದ್ದಳು. ಮೃತ ನನ್ನ ತಂಗಿಯ ಗಂಡ 2012 ರಲ್ಲಿ ತೀರಿಕೊಂಡಿರುತ್ತಾನೆ. ಮೃತ ನನ್ನ ತಂಗಿಯ 5 ಮಕ್ಕಳ ಪೈಕಿ 4 ಜನ ಗಂಡು ಮಕ್ಕಳಿಗೆ ಮದುವೆಯಾಗಿದ್ದು ಪ್ರತ್ಯೇಕವಾಗಿ ವಾಸವಾಗಿದ್ದಳು. ನನ್ನ ತಂಗಿಗೆ ಒಬ್ಬಳೇ ಮಗಳನ್ನು ಚಾಸಾ-12 ಇವಳು ಶಿಕಾರಿಪುರಕ್ಕೆ ಮದುವೆಯನ್ನು ಮಾಡಿಕೊಟ್ಟಿದ್ದು ಅವಳು ಗಂಡನ ಮನೆಯಲ್ಲಿ ವಾಸವಾಗಿದ್ದಳು. ನಾನು ಮತ್ತು ಚಾಸಾ-8 ರಿಂದ 12 ರವರು ನನ್ನ ಅಕ್ಕನ ಮನೆಗೆ ಆಗಾಗ ಹೋಗಿ ಬಂದು ಮಾಡುತಿದ್ದೆವು.

ತಾಃ 17.08.2019 ರಂದು ಬೆಳಿಗ್ಗೆ ಸುಮಾರು 8.30 ಕ್ಕೆ ಮೃತ ನನ್ನ ತಂಗಿಯ ಮಗ ಚಾಸಾ-8 ನಮಗೆ ಕರೆ ಮಾಡಿ ನನ್ನ ತಂಗಿಗೆ ಹೃದಯಾಘಾತವಾಗಿ ತೀರಿಕೊಂಡಿರುತ್ತಾಳೆಂದು ಹೇಳಿದರು. ನಾನು ವಿಷಯ ಗೊತ್ತಾಗಿ ನಾನು ಮತ್ತು ನನ್ನ ಇನ್ನೊರ್ವ ಸಹೋದರ ಮತ್ತು ಕುಟುಂಬ ಸಮೇತ ಶಿಗ್ಗಾಂವ ಹಳೇಪೇಟೆಯ ನನ್ನ ಮೃತ ತಂಗಿಯ ಮನೆಗೆ ಹೋದೆವು. ಮನೆಯ ಒಳಗಡೆ ಹೋದಾಗ ಅವಳು ದಿನಾಲು ಮಲಗುವ ಮಂಚದಲ್ಲಿ ಅಂಗಾತವಾಗಿ ಮಲಗಿದ್ದ ಸ್ಥಿತಿಯಲ್ಲಿದ್ದಳು. ಅವಳ ಎರಡು ಕೈಗಳನ್ನು ಸೀರೆಯಿಂದ ಮಂಚಕ್ಕೆ ಕಟ್ಟಲಾಗಿತ್ತು. ಅವಳ ಕುತ್ತಿಗೆಯನ್ನು ಸೀರೆಯಿಂದ ಬಿಗಿಯಲಾಗಿತ್ತು. ಸದರಿ ಸೀರೆಯಿಂದ ಅವಳ ಕಣ್ಣುಗಳನ್ನು ಕಟ್ಟಲಾಗಿತ್ತು. ನನ್ನ ತಂಗಿಯ ಬಟ್ಟೆಗಳು ಅಸ್ತವ್ಯಸ್ತವಾಗಿದ್ದವು. ನನ್ನ ತಂಗಿಯ ಎಡ ಕಪಾಳದ ಮೇಲೆ ಗಾಯವಾಗಿದ್ದು, ಬಾಯಿಯಿಂದ ರಕ್ತ ಸೋರಿಕೆಯಾಗಿತ್ತು. ಮಂಚದ ಪಕ್ಕ ರಕ್ತ ಹತ್ತಿದ್ದ ತಲೆದಿಂಬು ಬಿದ್ದಿತ್ತು. ನನ್ನ ತಂಗಿಯ ಬಳೆಗಳು ಒಡೆದು ಚೆಲ್ಲಾಪಿಲ್ಲಿಯಾಗಿದ್ದವು. ನನ್ನ ತಂಗಿ ಮೈಮೇಲೆ ಧರಿಸುತ್ತಿದ್ದ ಕೈಯಲ್ಲಿಯ 4 ಚಿಕ್ಕ ಬಂಗಾರದ ಬಳೆಗಳು, 2 ದೊಡ್ಡ ಬಂಗಾರದ ಬಳೆಗಳು, ಕತ್ತಲ್ಲಿದ್ದ ಚೈನ ಸರ ಒಡವೆಗಳು ಮೈ ಮೇಲೆ ಇರಲಿಲ್ಲ. ಸ್ವಲ್ಪ ಹೊತ್ತಿನ ನಂತರ ಎಲ್ಲರೂ ಬಂದರು. ನನ್ನ ತಂಗಿ ಸ್ಥಿತಿಯನ್ನು

ನೋಡಿ ಯಾರೋ ದುಷ್ಕರ್ಮಿಗಳು ನನ್ನ ತಂಗಿಯ ಬಂಗಾರದ ಒಡವೆಗಳಿಗಾಗಿ ನನ್ನ ತಂಗಿಯನ್ನು ಕೊಲೆ ಮಾಡಿರುತ್ತಾರೆಂದು ನಮಗೆ ತಿಳಿದುಬಂದಿರುತ್ತದೆ. ನಾನು ಮತ್ತು ನನ್ನ ತಂಗಿಯ ಗಂಡು ಮಕ್ಕಳು ಸೇರಿ ಮನೆಯ ಒಳಗಿನ ಕೋಣೆಗಳಿಗೆ ಹೋದಾಗ ಮನೆಯಲ್ಲಿ ಗ್ಯಾಸ ವಾಸನೆ ಹರಡಿಕೊಂಡಿತ್ತು. ಗ್ಯಾಸ ಸೀಲಿಂಡರ್ ನ ಪೈಪ್ ಬಿಚ್ಚಲಾಗಿತ್ತು. ಹೊಸ್ತಿಲಿನ ಮೇಲೆ ಹಚ್ಚಿದ ಹಿತ್ತಾಳೆಯ ದೀಪ ಆರಿತ್ತು. ಸದರಿ ದೀಪದ ಪಕ್ಕದಲ್ಲಿ ಬೆಂಕಿಪೊಟ್ಟಣ ಬಿದ್ದಿತ್ತು. ನಂತರ ಚಾಸಾ-1 ರವರು ಶಿಗ್ಗಾಂವ ಪೋಲಿಸರಿಗೆ ದೂರನ್ನು ನೀಡಿದರು. ನಂತರ ನಾವು ನಮ್ಮ ತಂಗಿಯ ಶವಸಂಸ್ಕಾರವನ್ನು ಮಾಡಿರುತ್ತೇವೆ. ನಾನು ಸಹ ಗಾಭರಿಯಲ್ಲಿದ್ದೆ.

ನಾನು ಪೋಲಿಸರಿಗೆ ಹೇಳಿಕೆ ಕೊಟ್ಟ ನಂತರ ಚಾಸಾ-12 ನನ್ನ ಮುಂದೆ, ನನ್ನ ತಂಗಿ ಸಾಯುವ ಮುನ್ನ ಆರೋಪಿ ಮತ್ತು ಅವನ ಹೆಂಡತಿ ಒಂದು ವಾರದಿಂದ ನನ್ನ ಅಕ್ಕ ವಾಸವಿದ್ದ ಮನೆಗೆ ಬಂದು ಮನೆಯ ಅಟ್ಟವನ್ನು ಒಂದು ಆಫೀಸಿನ ಕೆಲಸಕ್ಕಾಗಿ ಬಾಡಿಗೆ ನಾತೆಯಿಂದ ಕೊಡುವಂತೆ ಕೇಳಿ, ನಂತರ ಒಬ್ಬ ಮಹಿಳೆಯನ್ನು ಸದರಿ ಆಫೀಸಿನವಳು ಎಂದು ಕರೆದುಕೊಂಡು ಬಂದು ಪರಿಚಯ ಮಾಡಿದ ನಂತರ ನನ್ನ ತಂಗಿಗೆ ಅವರಿಗೆ ಚಹಾದ ವ್ಯವಸ್ಥೆ ಮಾಡಿದ್ದಾಗಿ ನನ್ನ ತಂಗಿ ಅವಳ ಮುಂದೆ ಹೇಳಿದ್ದಾಗಿ ಚಾಸಾ-12 ನಮ್ಮ ಮುಂದೆ ಹೇಳಿದಳು. ನಂತರ ನಾನು ಮತ್ತು ನನ ತಂಗಿಯ ಮಕ್ಕಳು ಸಂಶಯ ಬಂದು ಆರೋಪಿಯ ಮನೆಗೆ ಹೋಗಿ ನೋಡಿದಾಗ ಮನೆಯಲ್ಲಿ ಯಾರು ಇರದೇ ಅವನ ಮನೆಯ ಬಾಗಿಲು ಬಂದ್ ಆಗಿ ಮನೆಯ ಕೀಲಿ ಹಾಕಲಾಗಿತ್ತು.

ನಂತರ ಪೋಲಿಸರು ನನಗೆ ತಾಃ06.09.2019 ರಂದು ಆರೋಪಿಯನ್ನು ಪತ್ತೆ ಮಾಡಿ ಠಾಣೆಗೆ ಕರೆತಂದಿರುವುದಾಗಿ ಹೇಳಿದರು. ನಂತರ ನಾನು ಮತ್ತು ನಮ್ಮ ತಂಗಿಯ ಮಕ್ಕಳು ಠಾಣೆಗೆ ಹೋಗಿರುತ್ತೇವೆ. ಸದರಿ ಠಾಣೆಯಲ್ಲಿ ಆರೋಪಿ ಇದ್ದನು. ಪೋಲಿಸರಿಂದ ನಮಗೆ ಆರೋಪಿ ಮತ್ತು ಅವನ ಹೆಂಡತಿ ನನ್ನ ತಂಗಿಯ ಬಂಗಾರದ ಒಡವೆಗಳಿಗಾಗಿ ತಾಃ 16.08.2019 ರಂದು ರಾತ್ರಿ 11.30 ಸುಮಾರಿಗೆ ನನ್ನ ತಂಗಿಯನ್ನು ಮಾತನಾಡಿಸುವ ನೆಪ ಮಾಡಿಕೊಂಡು ಅವಳು ವಾಸವಿದ್ದ ಮನೆಗೆ ಹೋಗಿ ನನ್ನ ತಂಗಿ ಎರಡು ಕೈಗಳನ್ನು ಮಂಚಕ್ಕೆ ಕಟ್ಟಿ , ಕುತ್ತಿಗೆಗೆ ಮತ್ತು ಕಣ್ಣಿಗೆ ಸೀರೆ ಕಟ್ಟಿ, ತಲೆದಿಂಬನ್ನು ನನ್ನ ತಂಗಿಯ ಮುಖಕ್ಕೆ ಒತ್ತಿಹಿಡಿದು ಸಾಯಿಸಿದ ಬಗ್ಗೆ ಗೊತ್ತಾಯಿತು. ಆರೋಪಿ ಮತ್ತು ಅವನ ಹೆಂಡತಿ ನನ್ನ ತಂಗಿಯ ಬಂಗಾರದ ಒಡವೆಗಳಾದ 6 ಬಳೆಗಳು ಮತ್ತು ಒಂದು ಬಂಗಾರ ಲಾಕೇಟ ಸರ ತೆಗೆದುಕೊಂಡು ತಮ್ಮ ಮನೆಗೆ ಹೋಗಿ, ಮನೆಯಲ್ಲಿಟ್ಟು , ತಮ್ಮ ಮಕ್ಕಳನ್ನು ಅದಾಗಲೇ ಹುಬ್ಬಳ್ಳಿಗೆ ಕಳುಹಿಸಿ , ನಂತರ ತಾವು ಸಹ ಹುಬ್ಬಳ್ಳಿಯ ಉಣಕಲ್ ಕೆರೆಯ ಬಳಿ ಹೋಗಿ, ತಾವು ನನ್ನ ತಂಗಿಯನ್ನು ಕೊಲೆ ಮಾಡಿದ ವಿಷಯವನ್ನು ತನ್ನ ಮಕ್ಕಳಿಗೆ ಹೇಳಿ, ಪೋಲಿಸರು ತಮ್ಮನ್ನು ಉಳಿಸಲಾಗುವುದಿಲ್ಲ ಎಂದು ತಿಳಿದು ವಿಷ ಸೇವನೆ ಮಾಡಿ, ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನ ಪಟ್ಟು ವಿಷ ಸೇವಿಸಿದ್ದರು. ಆರೋಪಿ ಮತ್ತು ಅವನ ಹೆಂಡತಿ ವಿಷ ಸೇವಿಸಿದ್ದರಿಂದ ಸದರಿಯವರನ್ನು ಹುಬ್ಬಳ್ಳಿಯ ಕೀಮ್ಸ ಆಸ್ಪತ್ರೆಯಲ್ಲಿ ದಾಖಲು ಮಾಡಿದ್ದರು. ಚಿಕಿತ್ಸೆಯಲ್ಲಿದ್ದಾಗ ಆರೋಪಿಯ ಹೆಂಡತಿ ತೀರಿಕೊಂಡ ವಿಷಯ ಗೊತ್ತಾಯಿತು. ಈ ಬಗ್ಗೆ ನಾನು ಯಾರ ಮುಂದೆಯೂ ಹೇಳಿಕೆಯನ್ನು ನೀಡಿಲ್ಲ.

ಸಾಕ್ಷಿಗೆ ನಿಪಿ-12 ರಿಂದ 16 ಪೋಟೋಗಳನ್ನು ತೋರಿಸಿದಾಗ ಸದರಿ ಪೋಟೋಗಳ ಪೈಕಿ ಒಂದು ಪೋಟೋದಲ್ಲಿ 4 ಬಂಗಾರದ ಬಳೆಗಳು ಇದ್ದು, ಇನ್ನೊಂದು ಪೋಟೋಗಳಲ್ಲಿ 2 ಬಂಗಾರದ ಬಳೆಗಳು ಇದ್ದು, ಇನ್ನೊಂದು ಪೋಟೋಗಳಲ್ಲಿ ಲಾಕೇಟ ಇರುವ ಬಂಗಾರದ ಸರವನ್ನು ನೋಡಿ ಸಾಕ್ಷಿಯು ಗುರುತಿಸುತ್ತಾರೆ. ಸದರಿ ಪೋಟೋಗಳಲ್ಲಿರುವ ವಸ್ತುಗಳನ್ನು ಈಗಾಗಲೆ ಮುಮಾ-1 ರಿಂದ 3 ಎಂದು ಗುರುತಿಸಲಾಗಿದೆ. ಸಾಕ್ಷಿಗೆ ಮುಮಾ-4 ರಿಂದ 16 ಗಳನ್ನು ತೋರಿಸಿದಾಗ ಸದರಿಯವುಗಳು ತನ್ನ ತಂಗಿಗೆ ಸೇರಿದ ಬಟ್ಟೆಗಳು, ಹಾಸಿಗೆ , ತಲೆದಿಂಬು, ದೀಪ, ಬೆಂಕಿಪೊಟ್ಟಣ , ಸ್ವೇಟರ್ , ಸ್ಕಾರ್ಫ್ , ಬ್ಲೌಸ್ , ಲಂಗ , ಸ್ವಲ್ಪ ಒಡೆದ ಬಳೆಯ ಚೂರುಗಳು ಎಂದು ಗುರುತಿಸುತ್ತಾರೆ. ನಾನು ಠಾಣೆಯಲ್ಲಿ ನೋಡಿದ ಆರೋಪಿಯು ಈಗ ನ್ಯಾಯಾಲಯದ ಮುಂದೆ ಇರುತ್ತಾನೆ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷಿಯ ಪಾಟೀ ಸವಾಲಿಗೆ ಅನುಮತಿ ನೀಡಲಾಗಿದೆ)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>

ಚಾಸಾ-1 ದೂರು ಸಲ್ಲಿಸಿದ ನಂತರ ಪೋಲಿಸರು ನನ್ನನ್ನು ವಿಚಾರಿಸಿ ನನ್ನ ಹೇಳಿಕೆಯನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಅದಾದ ನಂತರ ಚಾಸಾ-8 ರವರಿಂದ ವಿಷಯ ತಿಳಿದ ವಿಷಯದ ಬಗ್ಗೆ ಪೋಲಿಸರಿಗೆ ಮರುಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ. ತಾಃ 06.09.2019 ರಂದು ನಾನು ಪೋಲಿಸರಿಗೆ ಮರುಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ನನಗೆ ನೆನಪಿನ ಶೈಕ್ತಿಯ ಕೊರತೆಯ ಕಾರಣ ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಈ ಬಗ್ಗೆ ಹೇಳಲು ಆಗುವುದಿಲ್ಲ.

ಆರೋಪಿ ಪರ ವಕೀಲರು ಸಮಯಾವಕಾಶ ಸಮಯಾವಕಾಶ ನೀಡಲಾಯ್ತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ಎಫ್.ಟಿ.ಎಸ್.ಸಿ-1
ಹಾವೇರಿ.